ಇವರ ಮೂಲಕ ನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ತಯಾರಿಸಿ ಈ ಯೋಜನೆಗಳ ಪ್ರಸ್ತಾವನೆಯನ್ನು ಆರ್ಥಿಕ ನೆರವನ್ನು ಕೋರಿ ಕೇಂದ್ರ ಪ್ರವಾಸೋದ್ಯಮ ಇಲಾಖೆಗೆ ರವಾನಿಸಲಾಗಿದೆ. ಆರ್ಥಿಕ ನೆರವು ಬಂದ ಕೂಡಲೇ ಮೇಲೆ ತಿಳಿಸಿರುವ ಯೋಜನೆಗಳನ್ನು ಕಾರ್ಯ ರೂಪಕ್ಕೆ ತರಲಾಗುವುದು. ಗುಲ್ಬರ್ಗಾ ಜಿಲ್ಲೆಯ ಬಗ್ಗೆ ಪ್ರವಾಸೋದ್ಯಮ ಇಲಾಖೆಯು ಹೊರ ತಂದಿರುವ ವರ್ಣ ಕಿರು ಹೊತ್ತಿಗೆಯಲ್ಲಿ ಹಜರತ್ ಖಾಜಾಬಂದಾ ನವಾಜ್ ದರ್ಗಾದ ಬಗ್ಗೆ ಭಾವ ಚಿತ್ರದೊಂದಿಗೆ ಪ್ರವಾಸದ ಮಾಹಿತಿಯನ್ನು ನೀಡಲಾಗಿದೆ.

2. ಬೆಳಗಾಂ ವಿಭಾಗದ ಧರ್ಮದತ್ತಿ ಇಲಾಖೆಯ ಕಮಿಟಿಗಳಿಗೆ ಸರಿಸಮನಾಗಿ ಹಣ ಮಂಜೂರು.

ಶ್ರೀ ಹೆಚ್.ವೈ. ಮೇಟಿ : ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರದ ಬೆಳಗಾಂ ವಿಭಾಗದಲ್ಲಿ ಧರ್ಮದತ್ತಿ ಇಲಾಖೆಯಲ್ಲಿ ಎಷ್ಟು ಕಮಿಟಿಗಳನ್ನು ಮಾಡಿರುತ್ತಾರೆ ಮತ್ತು ಯಾವ್ಯಾವ ಗ್ರಾಮಗಳಲ್ಲಿ ಮಾಡಿರುತ್ತಾರೆ ಮತ್ತು 1991-92 ಮತ್ತು 1992-93ನೇ ಸಾಲಿನಲ್ಲಿ ಈ ಕಮಿಟಿಗಳಿಗೆ ಹಣ ಮಂಜೂರು ಮಾಡಿದೆ ಮತ್ತು ಈ ಹಣವನ್ನು ಎಷ್ಟೆಷ್ಟು ಉಪಯೋಗವಾಗಿದೆ. ಇಳಿದ ಹಣವನ್ನು ಯಾವಾಗ ಖರ್ಚು ಮಾಡುತ್ತಾರೆ, ಮತ್ತು ಈ ಹಣವನ್ನು ಮಂಜೂರು ಮಾಡುವಾಗ ಸರ್ಕಾರ ಕೆಲವು ಕಮಿಟಿಗಳಿಗೆ ಮಲತಾಯಿ ಧೋರಣೆ ಅನುಸರಿಸಿ ತುಂಬಾ ತೊಂದರೆಯಾಗಿದೆ. ಆದ್ದರಿಂದ ಸರ್ಕಾರ ಇನ್ನು ಮುಂದೆ ಈ ರೀತಿ ಆಗದಂತೆ ಸರಿಸಮನಾಗಿ ಹಣ ಮಂಜೂರು ಮಾಡಬೇಕೆಂದು ಮಾನ್ಯ ಕಂದಾಯ ಸಚಿವರನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : ಮಾನ್ಯ ಸದಸ್ಯರು ಹೇಳಿದ್ದನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಉತ್ತರ ಕಳುಹಿಸಿಕೊಡಲಾಗುತ್ತದೆ.

3. ರಾಜ್ಯದ ನರ್ಸಿಗ್ ಹೋಗಳನ್ನು ದುಬಾರಿ ಹಣ ವಸೂಲ್ ಮಾಡುವುದನ್ನು ನಿಯಂತ್ರಿಸುವುದು.

ಶ್ರೀ ಬಿ.ಹೆಚ್. ಲಕ್ಷ್ಮಣಯ್ಯ : (ಬೇಲೂರು) ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ನಾಯಿಕೊಡೆಗಳಂತೆ ಹುಟ್ಟಿಕೊಂಡಿರುವ ನರ್ಸಿಂಗ್ ಹೋಂಗಳಲ್ಲಿ ಕಡಿಮೆ ಸೌಲಭ್ಯಗಳನ್ನು ಒದಗಿಸಿ ದುಬಾರಿ ಹಣ ವಸೂಲಿ ಮಾಡಿ ಜನಸಾಮಾನ್ಯರು ಹಾಗೂ ಮಧ್ಯಮ ವರ್ಗದವರನ್ನು ಕೊಳ್ಳೆ ಹೊಡೆಯುತ್ತಿರುವ ನರ್ಸಿಂಗ್ ಹೋಂಗಳ ಸುಧಾರಣೆಗಾಗಿ ಹಾಗೂ ವಸೂಲಿ ಮಾಡುವ ದುಬಾರಿ ಹಣದ ಬಗ್ಗೆ ಸರ್ಕಾರ ನಿಯಂತ್ರಣ ಹೇರುವುದು ತುಂಬಾ ಅಗತ್ಯವಾಗಿದೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ಇಲಾಖೆಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕ ಸರ್ಕಾರವು ಕರ್ನಾಟಕ ಪ್ರೈವೇಟ್ ನರ್ಸಿಂಗ್ ಹೋಮ್ಸ್ ರೇಗ್ಯುಲೇಷನ್ ಆಕ್ಟ್ 1976ನ್ನು ಜಾರಿಗೆ ತಂದಿದ್ದು, ನಂತರ ಅದರ ಆಧಾರದ ಮೇಲೆ ಒಂದು ಬಿಲ್ಲನ್ನು ತಂದು ಅದು ವಿಧಾನ ಸಭೆ ಮತ್ತು ವಿಧಾನ ಮಂಡಲದಲ್ಲಿ ಚರ್ಚೆಯಾಗಿ ಎರಡೂ ಸಭೆಗಳು ಅದನ್ನು ಅನುಮೋದಿಸಿ ಅದಕ್ಕೆ ಮಾನ್ಯ ರಾಜ್ಯಪಾಲರು 1-12-1976ರಲ್ಲಿ ತಮ್ಮ ಅನುಮೋದನೆಯನ್ನು ನೀಡಿ 4-12-1976ರಲ್ಲಿ ಅದು ರಾಜ್ಯ ಪತ್ರದಲ್ಲಿ ಪ್ರಕಟವಾಗಿತ್ತು. ಈ ಬಿಲ್ಲಿನ ಮೇಲೆ ಚರ್ಚೆ ನಡೆಯುವಾಗ ಅಂದಿನ ಮಾನ್ಯ ಆರೋಗ್ಯ ಮಂತ್ರಿಗಳು ಸಾಮಾನ್ಯ ಚರ್ಚೆಗೆ ಉತ್ತರವನ್ನು

ಕೊಡುವಾಗ, ಸರ್ಕಾರವು ಈ ಬಿಲ್ಲಿನಲ್ಲಿ ಪರಿಣಾಮ ಹೊಂದುವ ವೈದ್ಯರುಗಳು, ರೋಗಿಗಳ ಅಭಿಪ್ರಾಯವನ್ನು ಕ್ರೋಢೀಕರಿಸಿ ಸೂಕ್ತ ಶಿಫಾರಸ್ಸುಗಳನ್ನು ಮಾಡುವ ಸಲುವಾಗಿ ಎರಡೂ ಸದನಗಳ ಸದಸ್ಯರುಗಳನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿರುವುದಾಗಿ ಭರವಸೆಯನ್ನು ಕೊಟ್ಟ ಪ್ರಯುಕ್ತ 1976ರಲ್ಲಿ ಮಾನ್ಯ ಶಾಸಕರಾದ ಶ್ರೀ ಪುಟ್ಟಸ್ವಾಮಿಯವರ ನೇತೃತ್ವದಲ್ಲಿ ಎಂಟು ಜನ ಸದಸ್ಯರುಗಳನ್ನೊಳಗೊಂಡ ಒಂದು ಸಮಿತಿಯನ್ನು ನೇಮಕ ಮಾಡಲಾಗಿತ್ತು. ಈ ಸಮಿತಿಯು ತನ್ನ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದು ಈ ಸಮಿತಿಯು ಮಾಡಿದಂಥ ಶಿಫಾರಸ್ಸಿನಂತೆ ಈ ಆಕ್ಟ್ ಮತ್ತು ರೂಲ್ಸ್‌ನಲ್ಲಿ ಇತ್ತೀಚೆಗೆ ಪರಿಸ್ಥಿತಿಯ ಬದಲಾವಣೆ ಪರಿಗಣನೆಯಾಗಿ ತಿದ್ದುಪಡಿಯಾಗಬೇಕಾಗಿರುವುದರಿಂದ ಈ ಬಗ್ಗೆ ಅಧ್ಯಯನ ನಡೆಯಲು ಅದಷ್ಟು ಬೇಗ ಕ್ರಮ ತೆಗೆದುಕೊಳ್ಳಲಾಗುವುದು. ಮೇಲೆ ಕಾಣಿಸಿದ ಆಕ್ಟ್ ಜಾರಿಗೊಳಿಸಿದಾಗ, ಈ ನರ್ಸಿಂಗ್ ಹೋಮ್‌ಗಳ ಮೇಲೆ ಸರ್ಕಾರಕ್ಕೆ ಹತೋಟಿ ಬರುತ್ತದೆ. ಆದ್ದರಿಂದ ಅದಷ್ಟು ಬೇಗ ಈ ಆಕ್ಟ್‌ನ್ನು ಸೂಕ್ತ ತಿದ್ದುಪಡಿಯೊಂದಿಗೆ ಜಾರಿಗೊಳಿಸಿ ನರ್ಸಿಂಗ್ ಹೋಮ್‌ಗಳ ವ್ಯವಹಾರದ ಮೇಲೆ ಸುಧಾರಣೆಯನ್ನು ಮಾಡಲಾಗುವುದು.

4. ಮೈಸೂರು ಜಿಲ್ಲೆಗೆ ಯೋಜನೆ ಮತ್ತು ಯೋಜನೇತರ ಬಾಬುಗಳಿಗೆ ಹಣ ಬಿಡುಗಡೆಯಾಗದೆ ಕಾಮಗಾರಿಗಳು ಸ್ಥಗಿತ.

ಶ್ರೀ ಜಿ. ರಾಜುಗೌಡ (ಹನೂರು) : ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲೆಗೆ ಯೋಜನೆ ಮತ್ತು ಯೋಜನೇತರ ಬಾಬುಗಳಲ್ಲಿ 12.49 ಕೋಟಿ ರೂಪಾಯಿಗಳು 12.82 ಕೋಟಿ ರೂಪಾಯಿಗಳು ಕ್ರಮವಾಗಿ ಬಿಡುಗಡೆಯಾಗದಿರುವುದರಿಂದ ಅನೇಕ ಕಾಮಗಾರಿಗಳು ಸ್ಥಗಿತವಾಗಿದೆ. ನೀರು ಪೂರೈಕೆ ಮತ್ತು ನೈರ್ಮಲ್ಯ ಯೋಜನಾ ಕಾರ್ಯಕ್ರಮಗಳಿಗೆ ಒಟ್ಟು ರಾಜ್ಯ ಮತ್ತು ಕೇಂದ್ರದ ಪಾಲು ಸೇರಿ 411.95 ಲಕ್ಷ ರೂಪಾಯಿಗಳು ನಿಗದಿಯಾಗಿದ್ದು ಸರ್ಕಾರದ 207.80 ಲಕ್ಷ ರೂಪಾಯಿಗಳು ಬಿಡುಗಡೆಯಾಗಿರುತ್ತದೆ. ಇನ್ನೂ 204.15 ಲಕ್ಷ ರೂಪಾಯಿಗಳು ಬಿಡುಗಡೆಯಾಗಬೇಕಾಗಿದೆ. ಇದರಿಂದ ಅನೇಕ ಕುಡಿಯುವ ನೀರಿನ ಕಾಮಗಾರಿಗಳು ಸ್ಥಗಿತವಾಗಿವೆ. ಹನೂರು ಕ್ಷೇತ್ರದಲ್ಲಿ ಕಿರು ನೀರು ಸರಬರಾಜು ಯೋಜನೆಗೆ ಗಡಿ ಅಭಿವೃದ್ಧಿ ಯೋಜನೆಯ ಹಣದಲ್ಲಿ 2.10 ಲಕ್ಷ ರೂಪಾಯಿಗಳನ್ನು ಏಳು ಗ್ರಾಮಗಳಲ್ಲಿ ಕೈಗೊಳ್ಳುವಂತೆ ಬಹಳ ಹಿಂದೆಯೇ ಹಣವನ್ನು ಮೈಸೂರು ಜಿಲ್ಲಾ ಪರಿಷತ್‌ಗೆ ಜಮಾ ಮಾಡಿಟ್ಟು ಉಳಿಕೆ ಹಣವನ್ನು ಜಿಲ್ಲಾ ಪರಿಷತ್ ತುಂಬಲು ಒಪ್ಪಕೊಂಡು ಸರ್ಕಾರದಿಂದ ಸಕಾಲದಲ್ಲಿ ಹಣ ಬಿಡುಗಡೆಯಾಗದಿರುವುದರಿಂದ ಕುಡಿಯುವ ನೀರಿನ ಬವಣೆ ಹೇಳತೀರದಾಗಿದೆ. ದಯಮಾಡಿ ಮಾನ್ಯ ಗ್ರಾಮೀಣ ಅಭಿವೃದ್ಧಿ ಸಚಿವರು ಈ ಕಡೆ ಗಮನಹರಿಸಿ, ಪೂರ್ತಿ ಹಣವನ್ನು ಬಿಡುಗಡೆ ಮಾಡಿ ನಾನು ವಂತಿಗೆ ಕೊಟ್ಟಿರುವ ಕಾಮಗಾರಿಗಳನ್ನು ಕೂಡಲೇ ಪೂರೈಸಬೇಕೆಂದು ಮೈಸೂರು ಜಿಲ್ಲಾ ಪರಿಷತ್ ಮುಖ್ಯ ಕಾರ್ಯದರ್ಶಿಯವರಿಗೆ ಕೂಡಲೇ ಆದೇಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಪ್ರವಾಸೋದ್ಯಮ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲಾ ಪರಿಷತ್ತಿನ ಯೋಜನೆ ಮತ್ತು ಯೋಜನೇತರ ಅಡಿಯಲ್ಲಿ ಮಂಜೂರಾದ ಹಣ ಮತ್ತು ಬಿಡುಗಡೆಯಾದ (8-3-93 ರವರೆಗೆ) ಹಣ ಈ ರೀತಿ ಇದೆ.